ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ಸದಸ್ಯರ ಹೆಸರು	:	ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನ ಸಭೆಯಿಂದ ಚುನಾಯಿತರಾದವರು)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**328**
ಉತ್ತರಿಸಬೇಕಾದ ದಿನಾಂಕ	:	03.02.2021
ಉತ್ತರಿಸಬೇಕಾದ ಸಚಿವರು	:	ವಸತಿ ಸಚಿವರು

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>2019-20 ಮತ್ತು 2020-21 ನೇ ಸಾಲಿನಲ್ಲಿ ಗ್ರಾಮೀಣ ಯೋಜನೆಯಡಿಯಲ್ಲಿ ವಸತಿ ಮಂಜೂರಾತಿ ಆಗಿರುವ ಮನೆಗಳ ಸಂಖ್ಯೆ ಎಷ್ಟು ;</td><td>2019-20 ಮತ್ತು 2020-21 ನೇ ಸಾಲಿಗೆ ಗ್ರಾಮೀಣ ಯೋಜನೆಯಡಿಯಲ್ಲಿ ವಿವಿಧ ವಸತಿ ಯೋಜನೆಯಡಿ 45418 ಮನೆಗಳನ್ನು ಮಂಜೂರು ಮಾಡಲಾಗಿರುತ್ತದೆ. ಯೋಜನಾವಾರು ವಿವರ ಈ ಕೆಳಕಂಡಂತಿದೆ.
<table>
<tr><th>ಯೋಜನೆ</th><th>ಮಂಜೂರಾದ ಮನೆಗಳು</th></tr>
<tr><td>ದೇವರಾಜು ಅರಸು ವಸತಿ ಯೋಜನೆ</td><td>2989</td></tr>
<tr><td>ಪ್ರಧಾನ ಮಂತ್ರಿ ಆವಾಸ್ ಯೋಜನೆ(ಗ್ರಾ)</td><td>42429</td></tr>
<tr><td>ಒಟ್ಟು</td><td>45418</td></tr>
</table></td></tr>
<tr><td>(ಆ)</td><td>ಗ್ರಾಮೀಣ ವಸತಿ ಯೋಜನೆಯಡಿಯಲ್ಲಿ ಫಲಾನುಭವಿಗಳ ಆಯ್ಕೆ ಮಾಡಲು ಇರುವ ಮಾನದಂಡಗಳೇನು ;</td><td>ವಸತಿ ಇಲಾಖೆಯ ವಿವಿಧ ಗ್ರಾಮೀಣ ಯೋಜನೆಗಳಡಿ ಹಂಚಿಕೆ ಮಾಡುವ ಮನೆಗಳನ್ನು ಪಡೆಯಲು ನಿಗಧಿಪಡಿಸಿರುವ ಮಾನದಂಡಗಳು ಅನುಬಂಧದಲ್ಲಿ ಒದಗಿಸಲಾಗಿದೆ.</td></tr>
<tr><td>(ಇ)</td><td>ನಗರ ಯೋಜನೆಯಡಿ ಮಂಜೂರಾಗಿರುವ ಮನೆಗಳ ಸಂಖ್ಯೆ ಎಷ್ಟು ; ಈ ಪೈಕಿ ಎಷ್ಟು ಮನೆ ಪೂರ್ಣಗೊಂಡಿವೆ ; ಪೂರ್ಣಗೊಂಡಿರದಿದ್ದಲ್ಲಿ, ಅದಕ್ಕೆ ಕಾರಣಗಳೇನು ?</td><td>ನಗರ ಯೋಜನೆಯಡಿ ಮಂಜೂರಾಗಿರುವ ಮನೆಗಳ ಸಂಖ್ಯೆ ಹಾಗೂ ಪೂರ್ಣಗೊಂಡಿರುವ ಮನೆಗಳ ಸಂಖ್ಯೆಯ ವಿವರ ಕೆಳಕಂಡಂತಿದೆ :
<table>
<tr><th>ಯೋಜನೆಯ ಹೆಸರು</th><th>ಮಂಜೂರಾಗಿರುವ ಮನೆಗಳ ಸಂಖ್ಯೆ</th><th>ಪೂರ್ಣ ಗೊಂಡಿರುವ ಮನೆಗಳ ಸಂಖ್ಯೆ</th></tr>
<tr><td>ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ)</td><td>582250</td><td>91565</td></tr>
</table>
ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರದಡಿ) ಮನೆಗಳ ಕಾಮಗಾರಿ ಪೂರ್ಣಗೊಳ್ಳದೇ ಇರುವುದಕ್ಕೆ ಕಾರಣಗಳು ಈ ಕೆಳಕಂಡಂತಿದೆ : -
ಎ.ಹೆಚ್.ಪಿ ಯೋಜನೆ

ಫಲಾನುಭವಿಗಳ ಆಯ್ಕೆ, ವಂತಿಕೆ ಸಂಗ್ರಹಣೆ, ಬ್ಯಾಂಕ್ ಸಾಲ ಒದಗಿಸುವಲ್ಲಿ ವಿಳಂಬ.
ಗುತ್ತಿಗೆದಾರರು ಅನಾಸಕ್ತಿ ತೋರಿದ್ದರಿಂದ ಕೆಲವು ಯೋಜನೆಗಳಡಿ ಟೆಂಡರನ್ನು 3-4 ಬಾರಿ ಆಹ್ವಾನಿಸಲಾಗಿದೆ.
ಮನೆಗಳ ನಿರ್ಮಾಣಕ್ಕೆ ಗುರುತಿಸಿದ ಭೂಮಿಯನ್ನು ಹಸ್ತಾಂತರಿಸುವಲ್ಲಿ ವಿಳಂಬ.
</td></tr>
</table>

		• ಭೂ ವ್ಯಾಜ್ಯಗಳಿಂದ ಕಾಮಗಾರಿ ಪ್ರಾರಂಭವಾಗುವಲ್ಲಿ ವಿಳಂಬ • ಸಂಬಂಧಿತ ಇಲಾಖೆಗಳಿಂದ ಸ್ಟ್ಯಾಟುಟರಿ ಅಪ್ರೂವಲ್ ದೊರೆಯುವಲ್ಲಿ ವಿಳಂಬ. ಬಿ.ಎಲ್.ಸಿ ಯೋಜನೆ: • ಸದರಿ ಯೋಜನೆಯಡಿಯಲ್ಲಿ ಕೊರೋನಾ-19 ಕಾಯಿಲೆಯಿಂದಾಗಿ ಬಡ ಕುಟುಂಬಗಳ ಆದಾಯ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗಿ ಮನೆ ನಿರ್ಮಾಣದಲ್ಲಿ ವಿಳಂಬ. ಸರ್ಕಾರದ ಆದೇಶ ಸಂಖ್ಯೆ:DOH_59_HFA_2020, ದಿನಾಂಕ:04.07.2020 ರನ್ವಯ ಮುಂದಿನ 3 ವರ್ಷಗಳಲ್ಲಿ ಈಗಾಗಲೇ ಅನುಷ್ಠಾನಗೊಳಿಸಲು ಬಾಕಿ ಇರುವ 9.74 ಲಕ್ಷಗಳ ಮನೆಗಳನ್ನು ಹಂತ ಹಂತವಾಗಿ ಪೂರ್ಣಗೊಳಿಸುವವರೆಗೆ ಹೊಸ ಗುರಿಯನ್ನು ಪರಿಗಣಿಸಲಾಗುವುದಿಲ್ಲ ಎಂಬ ನಿರ್ಣಯ ಕೈಗೊಳ್ಳಲಾಗಿದೆ. 2019-20 ಮತ್ತು 2020-21 ನೇ ಸಾಲಿನಲ್ಲಿ ವಾಜಪೇಯಿ ನಗರ ವಸತಿ ಯೋಜನೆ ಮತ್ತು ಡಾ. ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆಯಡಿ ಹಾಗೂ ದೇವರಾಜ ಅರಸು ಯೋಜನೆಯಡಿ ಯಾವುದೇ ಗುರಿಯನ್ನು ನೀಡಿರುವುದಿಲ್ಲ.

ಸಂಖ್ಯೆ:ವಇ 55 ಹೆಚ್‌ಎಎಂ 2021

(ವಿ. ಸೋಮಣ್ಣ)
ವಸತಿ ಸಚಿವರು

ಅನುಬಂಧ

ವಿವಿಧ ಗ್ರಾಮೀಣ ಯೋಜನೆಗಳಡಿ ಹಂಚಿಕೆ ಮಾಡುವ ಮನೆಗಳನ್ನು ಪಡೆಯಲು ನಿಗಧಿಪಡಿಸಿರುವ ಮಾನದಂಡಗಳು ಕೆಳಕಂಡಂತಿದೆ.

- ಅರ್ಜಿದಾರರು ಕಡ್ಡಾಯವಾಗಿ ಮಹಿಳೆಯಾಗಿರಬೇಕು (ವಿವಾಹಿತ ಅಥವಾ ಏಕ ಮಹಿಳಾ ಒಡೆತನದ ಗೃಹಿಣಿ). ಮಾಜಿ ಯೋಧರು, ವಿಧುರರು, ಅಂಗವಿಕಲರು ಮತ್ತು ಹಿರಿಯ ನಾಗರೀಕರಾಗಿದ್ದಲ್ಲಿ ಪುರುಷರು ಸಹಾ ಅರ್ಹರಾಗಿರುತ್ತಾರೆ.
- ಅರ್ಜಿದಾರರ ಕುಂಟುಂಬವು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದಿದ್ದು, ವಾರ್ಷಿಕ ಆದಾಯವು ಗ್ರಾಮೀಣ ಪ್ರದೇಶದವರಾಗಿದ್ದಲ್ಲಿ ರೂ.32000/- ಕ್ಕಿಂತ ಕಡಿಮೆ ಇರಬೇಕು ನಗರ ಪ್ರದೇಶದಲ್ಲಿ ರೂ.87,600/-ರ ಒಳಗಿರಬೇಕು.
- ಅರ್ಜಿದಾರರ ಕುಟುಂಬವು ವಸತಿ ರಹಿತರಾಗಿದ್ದು, ಅರ್ಜಿದಾರರು ಅಥವಾ ಕುಂಟುಬದ ಯಾವುದೇ ಸದ್ಯಸರ ಹೆಸರಿನಲ್ಲಿ ಕರ್ನಾಟಕದ ಯಾವುದೇ ಭಾಗದಲ್ಲಿ ಸ್ವಂತ ಮನೆಯನ್ನು ಹೊಂದಿರಬಾರದು. ಶಿಥಿಲಗೊಂಡ ಮನೆ ಅಥವಾ ಗುಡಿಸಲಿನಲ್ಲಿ ವಾಸಿಸುತ್ತಿರುವವರು ಅರ್ಹರಾಗಿರುತ್ತಾರೆ.
- ಅರ್ಜಿದಾರರು ಸ್ವಂತ ನಿವೇಶನ ಹೊಂದಿದ್ದು ನಿವೇಶನಕ್ಕೆ ಸಂಬಂಧಿಸಿದಂತೆ ಖಾತ ಹೊಂದಿರಬೇಕು (ಪಾರಂಪರಿಕ ಅರಣ್ಯ ಹಕ್ಕುಗಳ ಕಾಯ್ದೆಯನ್ವಯ ಜಿಲ್ಲಾ ಸಮಿತಿಯಿಂದ ನೀಡಲಾದ ಹಕ್ಕುಪತ್ರ ಪಡೆದಿದ್ದಲ್ಲಿ ವಸತಿ ಸೌಕರ್ಯ ಪಡೆಯಲು ಪರಿಗಣಿಸಬಹುದಾಗಿದೆ.)
- ಬೇರೆ ಯಾವುದೇ ಯೋಜನೆ/ ಇಲಾಖೆಯಿಂದ ಈಗಾಗಲೇ ವಸತಿ ಸೌಲಭ್ಯ ಪಡೆದಿರಬಾರದು.
- ಪ್ರಧಾನ ಮಂತ್ರಿ ಆವಾಸ್ ಯೋಜನೆ (ಗ್ರಾ) ಯಡಿ ವಸತಿ ಸೌಲಭ್ಯ ಪಡೆಯಲು ಕೇಂದ್ರ ಸರ್ಕಾರದಿಂದ ನೀಡಲಾದ ಸಾಮಾಜಿಕ ಆರ್ಥಿಕ ಮತ್ತು ಜಾತಿ ಜನಗಣತಿ 2011ರ ಪಟ್ಟಿಯಲ್ಲಿ ಹೆಸರು ಸೇರಿರಬೇಕು.
- ಡಾ||ಬಿ.ಆರ್.ಅಂಬೇಡ್ಕರ್ ಆವಾಸ್ ಯೋಜನೆಯಡಿ ವಸತಿ ಸೌಲಭ್ಯ ಪಡೆಯಲು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟವರ್ಗಕ್ಕೆ ಸೇರಿದವರಾಗಿರಬೇಕು. ಈ ವರ್ಗದ ವಸತಿ ರಹಿತರಿಗೆ ಬೇಡಿಕೆ ಆಧಾರಿತವಾಗಿ ವಸತಿ ಕಲ್ಪಿಸಲಾಗುವುದು.